ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ3(4)ಪ್ರಾ.ಶಿ.ಉ.ವ್ಯಾ.ಬಿ.ಇಡಿ.ಅನುಮತಿ/2017-18 ದಿನಾಂಕ: 08.02.2017

## ಸುತ್ತೋಲೆ

ವಿಷಯ:- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ರೆಗ್ಯೂಲರ್ ಬಿ.ಇಡಿ.ತರಬೇತಿ ಪಡೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ ಇಡಿ 133 ಇ ಎಸ್ ಡಬ್ಲ್ಯೂ 2008
2.ಈ ಕಛೇರಿ ಪತ್ರ ಸಂಖ್ಯೆ ಸಿ3(4) ಪ್ರಾ.ಶಿ.ಉ.ವ್ಯಾ.ಅನು.1/2010 ದಿನಾಂಕ 16.08.2010

******

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಬಿ.ಇಡಿ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಲು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು/ಅಪರ ಆಯುಕ್ತರುಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರು ಅನುಮತಿ ಕೋರಿ ಮನವಿ ಸಲ್ಲಿಸಿ. ಅನುಮತಿ ಪಡೆಯುವ ಮೊದಲೇ ಬಿ.ಇಡಿ. ತರಬೇತಿಗೆ ಹಾಜರಾಗಿರುವುದು ಈ ಆಯುಕ್ತಾಲಯದ ಗಮನಕ್ಕೆ ಬಂದಿದೆ. ಬಿ.ಇಡಿ. ತರಬೇತಿಗೆ ಆಯುಕ್ತಾಲಯದ ಆದೇಶ ಪಡೆದ ನಂತರವೇ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ಸಂಬಂಧಿಸಿದ ಶಿಕ್ಷಕರನ್ನು ಸಂಬಂಧಿಸಿದ ಶಾಲೆಗಳಿಂದ ಬಿಡುಗಡೆಗೊಳಿಸಲು ತಿಳಿಸಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರುಗಳಿಂದ ರೆಗ್ಯೂಲರ್ ಬಿ.ಇಡಿ ವ್ಯಾಸಂಗಕ್ಕೆ ಅನುಮತಿ ಕೋರಿ ಬರುವ ಪ್ರಸ್ತಾವನೆಗಳನ್ನು ಕೆಳಕಂಡ ಷರತ್ತುಗಳ ಹಿನ್ನಲೆಯಲ್ಲಿ ಪರಿಶೀಲಿಸಿ ಅರ್ಹ ಪ್ರಕರಣಗಳನ್ನು ಮಾತ್ರ ಅಗತ್ಯ ಶಿಫಾರಸ್ಸಿನೊಂದಿಗೆ ಈ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದೆ.

1. ಕೆ.ಸಿ.ಎಸ್. ನಿಯಮ ಪರಿಶಿಷ್ಟ-II (ಎ) ರಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು.
2. ಉನ್ನತ ವ್ಯಾಸಂಗಕ್ಕೆ ನುಮತಿ ಬಯಸುವ ಶಿಕ್ಷಕರು 48 ವರ್ಷಕ್ಕಿಂತ ಕಡಿಮೆ ವಯೋಮಾನ ಉಳ್ಳವರಾಗಿರಬೇಕು.
3. ಈ ಸುತ್ತೋಲೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿ ನಿಖರ ಮಾಹಿತಿ ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿರಬೇಕು.
4. ಕನಿಷ್ಟ 5 ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿರಬೇಕು.
5. ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರವೆಂದು ಘೋಷಿಸಿರುವ ದಾಖಲೆಗಳನ್ನು ಲಗತ್ತಿಸಿರಬೇಕು.
6. ಬಿ.ಇಡಿ ತರಬೇತಿಯನ್ನು ಸ್ವಂತ ಖರ್ಚಿನಲ್ಲಿ ಭರಿಸತಕ್ಕದ್ದು.
7. ಉನ್ನತ ವಿದ್ಯಾಭ್ಯಾಸಕ್ಕಾಗಿ ನಿಯೋಜಿಸಬೇಕಾದ ಸರ್ಕಾರಿ ನೌಕರರ ಸಂಖ್ಯೆ ಸಂಬಂಧಿತ ಉದ್ಯೋಗಿಯ ಕೇಡರಿನ. ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡಾ 5 ನ್ನು ಮೀರದಂತೆ ಪ್ರಸ್ತಾವನೆ ಸಲ್ಲಿಸುವುದು (2001 ರ ನಂತರದ ನೇಮಕಾತಿ ತಾಲ್ಲೂಕು ವೃಂದದಲ್ಲಿ. 2001 ಕ್ಕೆ ಪೂರ್ವದಲ್ಲಿ ಜಿಲ್ಲಾ ವೃಂದದಲ್ಲಿ) (ಸಿಬ್ಬಂದಿಯ ಮಂಜೂರಾದ ಸಂಖ್ಯೆಯನ್ನು ಪರಿಗಣಿಸುವಾಗ RTE ನಿಯಮದಂತೆ ಅಗತ್ಯವಿರುವ ವೃಂದಬಲದ ಆಧಾರದಲ್ಲಿ ಲೆಕ್ಕಹಾಕತಕ್ಕದ್ದು)
8. ಈ ಕಾರ್ಯಾಲಯದ ಪತ್ರ ಸಂಖ್ಯೆ ಸಿ3(4)ಪ್ರಾ.ಶಿ. ಉ.ವ್ಯಾ. ಅನು.1/2010-11 ದಿನಾಂಕ 16.08.2010 ರ ಪ್ರಕಾರ ಸರ್ಕಾರಿ ಸೇವೆಗೆ ಸೇರಿದ ನಂತರ ಬಿ.ಎ. ಬಿ.ಎಸ್ಸಿ. ಉನ್ನತ ವ್ಯಾಸಂಗ ಮುಂದುವರಿಸಲು ನೀಡಿರುವ ನಿರ್ದೇಶನದ ರೀತಿಯಲ್ಲಿ ಬಿ.ಇಡಿ.ವ್ಯಾಸಂಗಕ್ಕೂ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿಕೊಂಡು ಸಂಬಂಧಿಸಿದ ಶಿಕ್ಷಕರಿಂದ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಉನ್ನತ ವ್ಯಾಸಂಗಕ್ಕಾಗಿ

ಶಾಲಾ ಕಾರ್ಯಕ್ಕೆ ಅಡಚಣೆ ಆಗದಿರುವಂತೆ ಬದಲಿ ವ್ಯವಸ್ಥೆ ಮಾಡುವ ಶಿಫಾರಸ್ಸಿನೊಂದಿಗೆ ಆಸಕ್ತ ಶಿಕ್ಷಕರ ಪ್ರಸ್ತಾವನೆಗಳನ್ನು ಸಕಾಲಕ್ಕೆ ಸಲ್ಲಿಸುವುದು.

9. ರೂ.50/- ರ ಛಾಪಾಕಾಗದದಲ್ಲಿ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಎಫ್ ಡಿ 9 ಎಸ್ ಆರ್ ಎಸ್ 1993 ದಿನಾಂಕ 18.11.1993 ರಲ್ಲಿ ವಿಧಿಸಿರುವ ಷರತ್ತಿನನ್ವಯ "ನಾನು ಉನ್ನತ ವ್ಯಾಸಂಗದ ಅವಧಿಯನ್ನು ಲೆಕ್ಕಕ್ಕಿಲ್ಲದ ದಿನಗಳು ಅಥವಾ ಕರ್ತವ್ಯ ರಹಿತ ದಿನಗಳು (Dies- Non or Not on Duty) ಎಂದು ಪರಿಗಣಿಸಲು ಈ ಮೂಲಕ ಸ್ವ ಇಚ್ಛೆಯಿಂದ ಒಪ್ಪಿಕೊಂಡಿರುತ್ತೇನೆ. ಈ ಉನ್ನತ ವ್ಯಾಸಂಗದ ಅವಧಿಯನ್ನು ವಾರ್ಷಿಕ ವೇತನ ಬಡ್ತಿ, ನಿವೃತ್ತಿ ವೇತನ ಸೌಲಭ್ಯ, ರಜೆ ಸೌಲಭ್ಯ ಮತ್ತು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹದಾಯಕವೆಂದು ಪರಿಗಣಿಸದಿರುವಂತೆ ಈ ಮೂಲಕ ಸ್ವ ಇಚ್ಛೆಯಿಂದ ಒಪ್ಪಿಕೊಳ್ಳುತ್ತೇನೆ" ಎಂದು ಲಿಖಿತ ಮುಚ್ಚಳಿಕೆಯನ್ನು ಪಡೆದಿರಬೇಕು.

10. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಶಿಕ್ಷಕರ ಸೇವಾ ವಿವರವನ್ನು ದೃಢೀಕರಿಸಿ ಸಲ್ಲಿಸುವುದು ಮತ್ತು ಈ ಕಛೇರಿಯಿಂದ ಹೊರಡಿಸಿರುವ ಚೆಕ್‌ಲಿಸ್ಟ್ ಪ್ರಕಾರ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸುವುದು.

11. ಶಿಕ್ಷಕರಿಗೆ ಯಾವ ಶೈಕ್ಷಣಿಕ ವರ್ಷದಲ್ಲಿ ಉನ್ನತ ವ್ಯಾಸಂಗಕ್ಕೆ ಅನುಮತಿ ಕೋರಲಾಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ನಮೂದಿಸುವುದು.

12. ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಾತರಿಮಾಡಿಕೊಂಡು ಉಪನಿರ್ದೇಶಕರು ಜಿಲ್ಲೆಯ ಅರ್ಹ ಶಿಕ್ಷಕರ ಕ್ರೋಢೀಕೃತ ಪ್ರಸ್ತಾವನೆಯನ್ನು ಈ ಕೆಳಗೆ ತಿಳಿಸಿರುವ ದಿನಾಂಕದ ಒಳಗೆ ಸಂಬಂಧಿಸಿದ ಆಯುಕ್ತಾಲಯಕ್ಕೆ ವರ್ಷಕ್ಕೆ ಒಂದು ಬಾರಿ ಮಾತ್ರ ಸಲ್ಲಿಸುವುದು.

ಬಿ.ಇಡಿ ವ್ಯಾಸಂಗಕ್ಕಾಗಿ ----05 ನೇ ಆಗಸ್ಟ್

ಬಿ.ಪಿ.ಇಡಿ ವ್ಯಾಸಂಗಕ್ಕಾಗಿ -----05 ನೇ ಆಗಸ್ಟ್- ಪ್ರತ್ಯೇಕ ಪ್ರಕರಣಗಳಲ್ಲಿ ಸರ್ಕಾರದ ಅನುಮತಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಸರ್ಕಾರದ ಆದೇಶವಾದಲ್ಲಿ ಮಾತ್ರ ಅವಕಾಶ ದೊರೆಯಲಿದೆ.

13. ಉಪನಿರ್ದೇಶಕರು, ಆಯುಕ್ತರಿಂದ ಅನುಮತಿ ದೊರೆತ ಪ್ರಕರಣಗಳಲ್ಲಿ ಅನುಮತಿ ನೀಡುವ ಆದೇಶಗಳನ್ನು ಹೊರಡಿಸುವಾಗ ಮೇಲಿನ ಷರತ್ತುಗಳನ್ನು ವಿಧಿಸಿ ಶಿಕ್ಷಕರಿಗೆ ಅನುಮತಿ ಆದೇಶವನ್ನು ಹೊರಡಿಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ರವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು
3. ಕ/ಪ್ರ